# ತೃತೀಯ ಲಿಂಗ



**ಗಂಡು– ಹೆಣ್ಣು ಎಂಬ ಲಿಂಗ ಗುರುತಿಸುವಿಕೆ ಭೌತಿಕ ಲಕ್ಷಣ ಮಾತ್ರ ಅಲ್ಲ. ಅದಕ್ಕೆ ಮಾನಸಿಕ ಕಾರಣಗಳೂ ಬೇಕಾಗುತ್ತವೆ.**

■ ಡಾ. ಎಂ.ಡಿ. ಸೂರ್ಯಕಾಂತ

ಭೌತಿಕ ಚಹರೆಗಳ ಆಳದೊಳಗೆಲ್ಲೋ ಲಿಂಗ ರೂಪ ಅಡಗಿದೆ. ಅದನ್ನೇ ಜೇಡರ ದಾಸಿಮಯ್ಯ ತಮ್ಮ ವಚನವೊಂದರಲ್ಲಿ 'ಮೊಲೆ ಮುಡಿ ಬಂದರೆ ಹೆಣ್ಣೆಂಬರು, ಗಡ್ಡ ಮೀಸೆ ಬಂದರೆ ಗಂಡೆಂಬರು, ನಡುವೆ ಸುಳಿವ ಆತ್ಮ ಹೆಣ್ಣೂ ಅಲ್ಲ ಗಂಡು ಅಲ್ಲ' ಎನ್ನುತ್ತಾರೆ. ಲಿಂಗವೂ ಒಂದು ಮನಸ್ಥಿತಿ. ಮಹಾಭಾರತದ ಬೃಹನ್ನಳೆ ಕೂಡ ಇಂತಹದ್ದೇ ಲಿಂಗ ರೂಪಾಂತರದ ಸ್ವರೂಪಗಳಲ್ಲಿ ಒಂದು ಎನ್ನುವುದು ನಮ್ಮ ಅರಿವಿನ ಭಿತ್ತಿಯಲ್ಲಿದೆ. ಅದು ಏಕೆ ಹೇಗೆ ಎನ್ನುವ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಪ್ರಯತ್ನ ಮಾತ್ರ ಇಂದಿಗೂ ನಡೆಯುತ್ತಲೇ ಇವೆ.

ಗಂಡಾಗಿ ಹುಟ್ಟಿ ಬೆಳೆದು ದೊಡ್ಡವರಾದಂತೆ ಹೆಣ್ಣಿನಂತೆ ವರ್ತಿಸುತ್ತಾರೆ. ಅಂದರೆ ಗಂಡೊಂದು ಹೆಣ್ಣಿನ ಉಡುಪು ಧರಿಸಿ, ಹೆಣ್ಣಿನ ಮಾತು, ನಡೆ–ನುಡಿಗಳನ್ನು ಅನುಕರಿಸುತ್ತಾಳೆ. ಇದಕ್ಕೆ ಸಮನಾಂತರವಾಗಿ ಹೆಣ್ಣಾಗಿ ಹುಟ್ಟಿ ಗಂಡಸಿನಂತೆ ವರ್ತಿಸುತ್ತಾರೆ. ಗಂಡಸು ಲೈಂಗಿಕವಾಗಿ ಹೆಣ್ಣಾಗಲು, ಹೆಣ್ಣು ಗಂಡಾಗಿ ಲಿಂಗಪರಿವರ್ತನೆಯಾಗಲು ಬಯಸುತ್ತಾರೆ. ಇಂಥ ವರ್ತನೆಗೆ ಲಿಂಗ ಗುರುತಿಸುವಿಕೆಯ ಸಮಸ್ಯೆ ಎನ್ನುತ್ತೇವೆ.

ಸಾಮಾನ್ಯವಾಗಿ ಇವರನ್ನು ತೃತೀಯ ಲಿಂಗಿಗಳೆಂದು ಕರೆಯುತ್ತೇವೆ. ಭಾರತದಲ್ಲಿ ಇಂಥವರು ಅಂದಾಜು 4.9 ಲಕ್ಷ ಹಾಗೂ ಕರ್ನಾಟಕದಲ್ಲಿ 20,000 ಜನರಿದ್ದಾರೆ ಎನ್ನುತ್ತದೆ ಒಂದು ಸಮೀಕ್ಷೆ. ಡಿಎಸ್‌ಎಮ್4 ಪ್ರಕಾರ ಇಪ್ಪತ್ತು ಸಾವಿರ ಪುರುಷರಲ್ಲಿ ಒಬ್ಬರಿಗೆ ಸ್ತ್ರೀ ಆಗಬೇಕೆಂಬ ಮತ್ತು ಐವತ್ತು ಸಾವಿರ ಮಹಿಳೆಯರಲ್ಲಿ ಒಬ್ಬಳಿಗೆ ಪುರುಷ ಆಗಬೇಕೆಂಬ ಬಯಕೆ ಇರುತ್ತದೆ ಎಂದು ಹೇಳಲಾಗಿದೆ. ಈ ಅಭಿಲಾಷೆಯ ಶೇ.68 ಮಕ್ಕಳು ಆಪ್ತ ಸಮಾಲೋಚನೆ ಹಾಗೂ ಮನೋಚಿಕಿತ್ಸೆಯಿಂದ ಗುಣಮುಖ ಹೊಂದಿ, ಸಮಸ್ಯೆಯಿಂದ ಹೊರಬಂದ ಉದಾಹರಣೆಗಳು ಇವೆ. ಅಂದರೆ ಸೂಕ್ತ ಚಿಕಿತ್ಸೆಯಿಂದ ಅವರು ತಾವು ಜನಿಸಿದಾಗಿನ ಭೌತಿಕ ಲಿಂಗತ್ವಕ್ಕೆ ಅನುಗುಣವಾಗಿ ವರ್ತಿಸುತ್ತಾರೆ. ಮನೋಚಿಕಿತ್ಸೆ ವಿಫಲವಾಗಿ ಮನೋಲಿಂಗ ರೂಪಾಂತರದ ಲಕ್ಷಣಗಳು ಉಲ್ಬಣಗೊಂಡರೆ ಲಿಂಗಪರಿವರ್ತನೆಗಾಗಿ ಸೆಕ್ಸ್ ರಿಅಸೈನ್ಮೆಂಟ್ ಸರ್ಜರಿ(ಎಸ್‌ಆರ್‌ಎಸ್)ಎಂಬ ಶಸ್ತ್ರಚಿಕಿತ್ಸೆ ಅನಿವಾರ್ಯವಾಗುತ್ತದೆ.

ಹಾಗೆಂದು ಲಿಂಗ ಪರಿವರ್ತನೆ ಬಯಸಿಬಂದವರಿಗೆಲ್ಲ ತಕ್ಷಣಕ್ಕೆ ಶಸ್ತ್ರಚಿಕಿತ್ಸೆ ಮಾಡುವುದಿಲ್ಲ. ಶಸ್ತ್ರಚಿಕಿತ್ಸೆಗೂ ಪೂರ್ವದಲ್ಲಿ ಕನಿಷ್ಠ ಮೂರು ತಿಂಗಳು ಆಪ್ತ ಸಮಾಲೋಚನೆ ಹಾಗೂ ಮನೋಚಿಕಿತ್ಸೆ ನೀಡಲಾಗುತ್ತದೆ. ಇದಾದನಂತರ ಮಹಿಳೆಯಾಗಲೇ ಬೇಕು ಎನ್ನುವ ಬಯಕೆ ಹೊತ್ತವರು ಕನಿಷ್ಠ ಆರು ತಿಂಗಳು ಇಸ್ಟ್ರೋಜನ್ ಹಾಗೂ ಪ್ರೊಜೆಸ್ಟ್ರಾನ್ ಹಾರ್ಮೋನ್ ಔಷಧ ಸೇವಿಸಬೇಕು. ಈ ಔಷಧಿಯಿಂದ ಕೆಲವು ಬಾಹ್ಯಲಕ್ಷಣಗಳು ವೃದ್ಧಿಯಾಗುತ್ತದೆ.

ಗಂಡಾಗಿ ಹುಟ್ಟಿ ಹೆಣ್ಣಾಗ ಬಯಸುವವರಿಗೆ ದೇಹದಲ್ಲಿ ಕೊಬ್ಬು ಸಂಗ್ರಹಣೆಯಾಗುತ್ತದೆ. ಮುಖ ಮತ್ತು ದೇಹದ ಮೇಲಿನ ಕೂದಲು ಉದುರುತ್ತವೆ. ಹೆಣ್ಣಾಗಿ ಜನಿಸಿ, ಗಂಡಸಾಗಿ ಬಯಸುವವರು ಟೆಸ್ಟೊಸ್ಟಿರಾನ್ ಸೇವಿಸಬೇಕು. ಇದರಿಂದ ದೇಹ ಮತ್ತು ಮುಖದ ಮೇಲೆ ಪುರುಷ ಬಾಹ್ಯ ಲಕ್ಷಣ ಗಂಡಿನಂತಾಗುತ್ತದೆ. ಹಾರ್ಮೋನ್ ಥೆರಪಿಯನ್ನು ವೈದ್ಯಕೀಯ ಮೇಲ್ವಿಚಾರಣೆಯಲ್ಲಿ ತೆಗೆದುಕೊಳ್ಳಬೇಕು. ಕೆಲವೊಮ್ಮ ಇದರಿಂದ ಮೂತ್ರಪಿಂಡ ಮತ್ತು ಪಿತ್ತಜನಕಾಂಗ ಮೇಲೆ ಅಡ್ಡ ಪರಿಣಾಮ ಉಂಟಾಗುವ ಅಪಾಯವೂ ಇದೆ.

## ಯಾರು ಲಿಂಗಾಂತರ ಆಗಬಹುದು?

ಲಿಂಗತ್ವ ಗುರುತಿಸುವಿಕೆ ಹಾಗೂ ಲಿಂಗ ಪರಿವರ್ತನೆಗೆ ಕನಿಷ್ಠ ಎರಡು ವರ್ಷ ಬೇಕಾಗುತ್ತದೆ. ಹಾಗೆ ಆಗಬಯಸುವ ವ್ಯಕ್ತಿಗೆ 18ವರ್ಷ ತುಂಬಿರಬೇಕು. ಅನುವಂಶಿಕ ಅಥವಾ ಮನೋವ್ಯಾಧಿಗಳಿರಬಾರದು.

ಶಸ್ತ್ರಚಿಕಿತ್ಸೆಗೆಗಾಗಿ ಕೆಲವು ದಾಖಲೆ ಅವಶ್ಯ. ಇಬ್ಬರು ಮನೋತಜ್ಞ ಹಾಗೂ ಅಂತಸ್ರಾವ ಶಾಸ್ತ್ರಜ್ಞ (ಎಂಡೊಕ್ರೈನಾಲಜಿಸ್ಟ್)ರಿಂದ ಲಿಂಗ ಗುರುತಿಸುವ ಸಮಸ್ಯೆ ಇರುವ ಬಗ್ಗೆ ಮತ್ತು ಶಸ್ತ್ರಚಿಕಿತ್ಸೆ ಅವಶ್ಯಕತೆ ಬಗ್ಗೆ ದೃಢೀಕರಣ ಪತ್ರ ಹಾಗೂ ಶಸ್ತ್ರಚಿಕಿತ್ಸಾ ಅನುಮತಿ ಪತ್ರ ತರಬೇಕು. ಮದುವೆ ಆಗಿದ್ದರೆ ಸಂಗಾತಿಯ ಸಮ್ಮತಿ ಅವಶ್ಯ. ಸಾಮಾನ್ಯವಾಗಿ ಪ್ಲಾಸ್ಟಿಕ್ ಸರ್ಜನ್ ಇಂತಹ ಶಸ್ತ್ರಚಿಕಿತ್ಸೆ ಮಾಡುತ್ತಾರೆ ಮತ್ತು ವಿಶ್ವ ತೃತೀಯ ಲಿಂಗಿ ಆರೋಗ್ಯ ವೃತ್ತಿಪರರ ಸಂಸ್ಥೆಯ(ಡಬ್ಲ್ಯೂ.ಪಿ.ಎ.ಟಿ.ಎಚ್) ಮಾರ್ಗಸೂಚಿ ಪಾಲಿಸಲಾಗುತ್ತಿದೆ.

ಅನುಭವಿ ಪ್ಲಾಸ್ಟಿಕ್ ಸರ್ಜನ್ ಒಬ್ಬರು 'ಲಿಂಗಾಂತರ ಕಾನೂನು ಬದ್ಧವಾಗಿದ್ದು, ವೈದ್ಯಕೀಯವಾಗಿ ಮಾನ್ಯತೆ ಇದೆ ಎನ್ನುತ್ತಾರೆ. ಗಂಡಾಗಿ ಹುಟ್ಟಿ ಹೆಣ್ಣಾಗ ಬಯಸುವವರಿಗೆ ಕೃತಕ ಯೋನಿ ರಚಿಸಲಾಗುತ್ತದೆ. ಇದಲ್ಲದೆ ಸ್ತನವರ್ಧನೆಗೆ ಸೌಂದರ್ಯ ವರ್ಧಕ ಶಸ್ತ್ರಚಿಕಿತ್ಸೆ ಮಾಡಲಾಗುತ್ತದೆ. ಇದರ ಜೊತೆ ಹಾರ್ಮೋನ್ಸ್ ಔಷಧ ಉಪಚರಿಸಲಾಗುತ್ತದೆ.

ಹೆಣ್ಣು ಗಂಡಾಗುವ ಶಸ್ತ್ರಚಿಕಿತ್ಸೆ ಹೆಚ್ಚು ಸಂಕೀರ್ಣ. ಅವರಿಗೂ ಪುರುಷ ಕೃತಕ ಜನನಾಂಗ ರೂಪಿಸಿ ಗಂಡಿನ ಹಾರ್ಮೋನ್ ನೀಡಬೇಕು. ಶಸ್ತ್ರಚಿಕಿತ್ಸೆ ಆದ 2–3 ವರ್ಷಕ್ಕೆ ನಡವಳಿಕೆಯಲ್ಲಿ ಸಂಪೂರ್ಣ ಬದಲಾಗಿ ಗಂಡಿನಂತೆ ಆಗುತ್ತಾರೆ. ಶಸ್ತ್ರ ಚಿಕಿತ್ಸೆ ನಂತರ ಪ್ರಮಾಣ ಪತ್ರ ನೀಡಲಾಗುತ್ತದೆ. ಅದರ ಆಧಾರದ ಮೇಲೆಯೇ ಮತದಾರರ ಗುರುತಿನ ಚೀಟಿ ಸೇರಿದಂತೆ ಸರ್ಕಾರಿ ಸೌಲಭ್ಯ ಪಡೆಯಬಹುದು. ಹೀಗೆ ಲಿಂಗ ಬದಲಿಸಿಕೊಂಡವರನ್ನು ಟ್ರಾನ್ಸ್ ಸೆಕ್ಷ್ಯುಯಲ್ ಮಹಿಳೆ/ಪುರುಷ ಎನ್ನುತ್ತೇವೆ. ಅವರಿಗೆ ಲೈಂಗಿಕ ಸುಖ ಸಾಧ್ಯ, ಸಂತಾನೋತ್ಪತ್ತಿ ಆಗುವುದಿಲ್ಲ.

ಲಿಂಗ ಸಮಸ್ಯೆಯನ್ನು ಗುರುತಿಸಿ ಚಿಕಿತ್ಸೆ ನೀಡದಿದ್ದರೆ ಕೆಲವು ಅಪಾಯಗಳಿವೆ. ಸಮಾಜದಲ್ಲಿ ಅಪನಿಂದನೆಗೆ ತುತ್ತಾಗುತ್ತಾರೆ. ತಾರತಮ್ಯ, ಸಾರ್ವಜನಿಕ ಸೌಲಭ್ಯ ಪಡೆಯಲು ತೊಂದರೆ ಎದರಿಸಬೇಕಾಗುತ್ತದೆ. ರೇಷನ್, ಆಧಾರ್ ಪಾಸ್‌ಪೋರ್ಟ್, ಡ್ರೈವಿಂಗ್ ಲೈಸೆನ್ಸ್ ಪಡೆಯಲು ಕಷ್ಟವಾಗುತ್ತದೆ. ದೈಹಿಕ– ಮಾನಸಿಕ ಹಿಂಸೆಯನ್ನು ಹೊರಗಿನ ಒತ್ತಡದಿಂದ ಅನುಭವಿಸುತ್ತಾರೆ. ಅದನ್ನು ಸಹಿಸದೆ ಊರು ಬಿಟ್ಟು ಭಿಕ್ಷೆ– ವೇಶ್ಯಾವಾಟಿಕೆಯ ಹಾದಿಯನ್ನು ಕಂಡುಕೊಳ್ಳುತ್ತಾರೆ.

ಲಿಂಗ ಗುರುತಿಸುವಿಕೆಯ ಸಮಸ್ಯೆಯ ಲಕ್ಷಣಗಳು ಕಂಡಕೂಡಲೆ, ಮಕ್ಕಳ ತಜ್ಞ/ಮನೋತಜ್ಞರನ್ನು ಸಂಪರ್ಕಿಸಬೇಕು. ಮೂಢನಂಬಿಕೆಗೆ ತುತ್ತಾಗಿ ದೇವರು, ಮಾಟ ಮಂತ್ರಕ್ಕೆ ಮಾರುಹೋಗದೆ ವೈಜ್ಞಾನಿಕ ಮಾರ್ಗವನ್ನು ಅನುಸರಿಸಬೇಕು. ಅಸಡ್ಡೆಯನ್ನು ತೋರಿಸಿದರೆ ಮಗುವಿನ ಭವಿಷ್ಯ ಮಾತ್ರವಲ್ಲ ಜೀವ ಹಾನಿಯಾಗುವ ಅಪಾಯವೂ ಇದೆ.

(ಅನಿವಾರ್ಯ ಕಾರಣಗಳಿಂದ ಈವಾರ ಸುಖೀ ದಾಂಪತ್ಯ ಪ್ರಕಟವಾಗಿಲ್ಲ. –ಸಂ)